ದಿನಾಂಕಃ 04.07.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

5 ಲಕ್ಷಗಳನ್ನು 4 ಕಂತುಗಳಲ್ಲಿ ಯಾವ ಯಾವ ದಿನಾಂಕದಂದು ನೀಡಿರುತ್ತೇನೆ ಹೇಳಲು ಆಗುವುದಿಲ್ಲ. 4 ಕಂತುಗಳಲ್ಲಿ ಆರೋಪಿಯವರಿಗೆ ಹಣವನ್ನು ನೀಡಿದ ಸಮಯದಲ್ಲಿ ಬೇರೆ ಯಾರು ಇರಲಿಲ್ಲ. ಐಟಿ ರಿಟರ್ನ್ಸ್‌ನ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಆ ಕಾರಣದಿಂದ ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 9ರ ನೋಟೀಸನ್ನು ಈ ಪ್ರಕರಣಕ್ಕಾಗಿ ನಾನು ಸೃಷಿಸಿರುತ್ತೇನೆಂದರೆ ಸರಿಯಲ್ಲ. ವಿವಾದಿತ ಚೆಕ್ಕಿನಲ್ಲಿರುವ ಬರವಣಿಗೆ ಯಾರು ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ವಿವಾದಿತ ಚೆಕ್ಕಿನಲ್ಲಿರುವ ಬರವಣಿಗೆಯನ್ನು ನನ್ನ ಮುಂದೆ ಮಾಡಿರುವುದಿಲ್ಲ. ಪಲ್ಲವಿ ಕೇರಂ ಸಂಸ್ಥೆ ಮುಚ್ಚಿ ಹೋಗಿ 5-6 ವರ್ಷಗಳಾಗಿವೆಯೆಂದರೆ ನನಗೆ ಗೊತ್ತಿಲ್ಲ. ಸದರಿ ಸಂಸ್ಥೆ ಇದೆಯೋ ಇಲ್ಲವೋ ನಾನು ಪರಿಶೀಲನೆ ಮಾಡಿರುವುದಿಲ್ಲ. ನನ್ನ ದೂರಿನಲ್ಲಿ ತಿಳಿಸಿರುವ ಸಂಜಯ್ ಕೇರಂ ಸಂಸ್ಥೆ ಆರಂಬವಾಗಿ 5-6ವರ್ಷಗಳಾಗಿದೆಯೆಂದರೆ ನನಗೆ ಗೊತ್ತಿಲ್ಲ. ಪಲ್ಲವಿ ಕೇರಂ ಸಂಸ್ಥೆಯನ್ನು ಮುಚ್ಚಿ ಅದನ್ನೇ ಸಂಜಯ್ ಕೇರಂ ಸಂಸ್ಥೆಯಾಗಿ ಮರು ನೇಮಕಾತಿ ಮಾಡಿ ಆಂರಬಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ವಿವಾದಿತ ಚೆಕ್ಕುಗಳನ್ನು ಕಂಪನಿಯ ಹೆಸರಿನಲ್ಲಿ ನೀಡಿರುವ ಬಗ್ಗೆ ಹಾಗೂ ಸದರಿ ಕಂಪನಿ ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಪಲ್ಲವಿ ಕೇರಂ ಸಂಸ್ಥೆಯವರು 2009ರಲ್ಲಿ ಪಡೆದ ಸಾಲದ ಬದ್ರತೆಗಾಗಿ ನೀಡಿದ ವಿವಾದಿತ ಚೆಕ್ಕುಗಳು ಆಗಿರುತ್ತದೆಯೆಂದರೆ ಸರಿಯಲ್ಲ. ಆರೋಪಿಯವರು ಪಡೆದ ಒಂದು ಲಕ್ಷ ಸಾಲವನ್ನು ನಮಗೆ ಮರುಪಾವತಿ ಮಾಡಿರುತ್ತಾರೆಂದರೆ ಸರಿಯಲ್ಲ. ವಿವಾದಿತ ಚೆಕ್ಕುಗಳನ್ನು ಹಿಂದುರುಗಿಸುತ್ತೇನೆಂದು ಹೇಳಿ ಅದರಲ್ಲಿ ನಾನೇ ಬರವಣಿಗೆಯನ್ನು ಮಾಡಿ ಸುಳ್ಳು ಪ್ರಕರಣ ಹಾಕಿರುತ್ತೇನೆಂದರೆ ಸರಿಯಲ್ಲ. ಆರೋಪಿಯವರು ನನಗೆ ಯಾವುದೇ ಹಣವನ್ನು ಕೊಡಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯವರಿಂದ ಅಕ್ರಮವಾಗಿ ಹಣವನ್ನು ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ ರೂ 5 ಲಕ್ಷ ಹಣವನ್ನು ಕೊಡುವಷ್ಟು ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

XVII ಎ.ಎಸ್.ಸಿ.ಜೆ, ಎ.ಸಿ.ಎಂ.ಎಂ